1	2	3	4
12.	ಸಚಿನ್ ಕುಲಕರ್ಣಿ	ಪರ್‌ಫೆಕ್ಟ್ ಮೌಲ್ಡ್ಸ್‌ಲಿ., ಪುಣೆ	ಜಿ.ಎಂ
13.	ಪ್ರಮೋದ್ ಸವದತ್ತಿ	ಗಣಿಗೆ ಪ್ರೆಸ್ಸಿಂಗ್, ಪುಣೆ	ವರ್ಗ-1
14.	ದೀಪಕ್. ಎಸ್.ಕೆ.	ದ್ವಸಕ ಟೂಲ್ಸ್, ಹುಬ್ಬಳ್ಳಿ	ವರ್ಗ-2ಎ
15.	ಗಂಗಾಧರ್. ಆರ್.ಕೆ.	ಟೂಲಿಂಗ್ ಸಂಬಂಧಿತ ಸ್ವಉದ್ಯೋಗ	ವರ್ಗ-2ಎ
16.	ಪ್ರಶಾಂತ್	ಸ್ವ ಉದ್ಯೋಗ	ವರ್ಗ-2ಎ
17.	ವಿನಯ್ ಕುಮಾರ್ ಕೆ.	ಲಕ್ಷ್ಮಿ ಎಲೆಕ್ಟ್ರಾನಿಕ್ಸ್, ಬೆಂಗಳೂರು	ವರ್ಗ-2ಎ
18.	ಷರೀಫ್ ಸಾಬ್ ನದಾಫ್	ಬೆಂಗಳೂರಿನಲ್ಲಿ ಉದ್ಯೋಗ	ವರ್ಗ-2ಬಿ
19.	ಷಯೀಫ್ ಅಹ್ಮದ್	ಮ್ಯಾಕ್‌ವೆಲ್ ಮೆಕಾ ಪ್ಲಾಸ್ಟ್	ವರ್ಗ-2ಬಿ
20.	ಚೇತನ. ಕೆ	ವಿದ್ಯಾಭ್ಯಾಸ ಏರೋನಾಟಿಕ್ ಇಂಜಿನಿಯರಿಂಗ್ ಪದವಿ	ವರ್ಗ-3ಬಿ

ಸೂಚನೆ: 1998 ರಲ್ಲಿ ಹುಬ್ಬಳ್ಳಿಯಲ್ಲಿರುವ ಜಿ.ಟಿ.ಟಿ.ಸಿ. ಉಪಕೇಂದ್ರದ ಸ್ಥಾಪನೆಯಾಗಿದ್ದು, ಪ್ರಸ್ತು ಕೋರ್ಸನ್ನು ಪ್ರಾರಂಭಿಸಲಾಗಿದೆ. ಈ ಕೋರ್ಸು 4 ವರ್ಷಗಳ ಕೋರ್ಸಾಗಿದ್ದು 20 ಅಭ್ಯರ್ಥಿಗಳು ತರಬೇತಿ ಹೊಂದಿರುತ್ತಾರೆ.

ಸಮಾಜ ಕಲ್ಯಾಣ ಇಲಾಖೆಗೆ ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನ

278(2316) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಪರಿಶಿಷ್ಟ ಜಾತಿ, ವರ್ಗಗಳ ಜನಾಂಗದ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ವಿವಿಧ ಬಾಬ್ತುಗಳಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ?

2) ಕಳೆದ ಎರಡು ವರ್ಷಗಳಲ್ಲಿ ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದ ಅನುದಾನಕ್ಕೆ ಎಷ್ಟು ಮೊತ್ತದ ಪ್ರಸ್ತಾವನೆಯನ್ನು ಸಲ್ಲಿಸಿತ್ತು?

3) ಕೇಂದ್ರ ಸರ್ಕಾರದಿಂದ ಈ ಜನಾಂಗದ ಅಭಿವೃದ್ಧಿಗೆ ಬಿಡುಗಡೆಯಾದ ಮೊತ್ತವನ್ನು ರಾಜ್ಯ ಸರ್ಕಾರವು ಯಾವ ಪ್ರಮಾಣದಲ್ಲಿ ಖರ್ಚು ಮಾಡಿದೆ?

4) ಖರ್ಚು ಮಾಡದಿದ್ದಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣವನ್ನು ಯಾವ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳಲಾಗಿದೆ, ಅದಕ್ಕೆ ಕಾರಣಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

1) (ರೂ. ಲಕ್ಷಗಳಲ್ಲಿ)

	2000-01	2001-02
ಪರಿಶಿಷ್ಟ ಜಾತಿ -	4310.27	4286.48
ಪರಿಶಿಷ್ಟ ಪಂಗಡ -	1441.67	2797.38

2) (ರೂ. ಲಕ್ಷಗಳಲ್ಲಿ)

	2000-01	2001-02
ಪರಿಶಿಷ್ಟ ಜಾತಿ -	5784.02	5751.92
ಪರಿಶಿಷ್ಟ ಪಂಗಡ -	1451.67	2807.38

3) ಪೂರ್ಣ ಪ್ರಮಾಣದಲ್ಲಿ ಖರ್ಚು ಮಾಡಲಾಗಿದೆ.

4) ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲೆಯ ನಾರಂಜಾ ಸಕ್ಕರೆ ಕಾರ್ಖಾನೆಗೆ ನೇಮಕಾತಿ ಪರವಾನಿಗೆ

279(2292) ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ ಜನವಾಡಾ ಹತ್ತಿರ ಹೊಸದಾಗಿ ನಿರ್ಮಿಸಲಾದ ನಾರಂಜಾ ಸಕ್ಕರೆ ಕಾರ್ಖಾನೆಯಲ್ಲಿ ಒಟ್ಟು ತುಂಬಬೇಕಾದ ಹುದ್ದೆಗಳೆಷ್ಟು?

ಆ) ಹುದ್ದೆಗಳನ್ನು ತುಂಬಲು ಸರ್ಕಾರ ಕಾರ್ಖಾನೆಗೆ ಪರವಾನಿಗೆ ನೀಡಿದೆಯೇ?

ಇ) ಹುದ್ದೆಗಳನ್ನು ತುಂಬಲು ಅನುಸರಿಸಬೇಕಾದ ಕಾನೂನು ಹಾಗೂ ಮಾರ್ಗಸೂಚಿ ಸರ್ಕಾರ ರಚಿಸಿದೆಯೇ?

ಈ) ಸದರಿ ಹುದ್ದೆಗಳಲ್ಲಿ ಆಯಾ ವರ್ಗಗಳಿಗೆ ಮೀಸಲಾತಿಗಳೆಷ್ಟು?

ಉ) ಇಲ್ಲಿಯವರೆಗೆ ಕಾರ್ಖಾನೆ ಪ್ರಾರಂಭಿಸಲು ತುಂಬಿರುವ ಹುದ್ದೆಗಳೆಷ್ಟು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು):

ಅ) ಇದು 2500 ಟಿಸಿಡಿ ಸಾಮರ್ಥ್ಯದ ಹೊಸ ಸಕ್ಕರೆ ಕಾರ್ಖಾನೆಯಾಗಿದೆ. ಇದಕ್ಕನುಗುಣವಾಗಿ ಈ ಕಾರ್ಖಾನೆಗೆ ಒಟ್ಟು 425 ಸಿಬ್ಬಂದಿಯನ್ನು ತುಂಬಬೇಕಾಗಿದೆ.

ಆ) ತಾತ್ವಿಕ ಅನುಮೋದನೆ ನೀಡಿದೆ.

ಇ) ಸಹಕಾರ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 17(1) ರಡಿ ಕಾರ್ಖಾನೆಗೆ ಅವಶ್ಯಕವಾದ ಹುದ್ದೆ ಸಿಬ್ಬಂದಿ ವ್ಯಂದ ಬಲಕ್ಕೆ ಮಂಜೂರಾತಿ ಪಡೆದುಕೊಳ್ಳಬೇಕು.

ಈ ರೀತಿ ಮಂಜೂರಾದ ಹುದ್ದೆಗಳಿಗೆ ಸಹಕಾರ ಸಕ್ಕರೆ ಕಾರ್ಖಾನೆಗಳಲ್ಲಿ ಸಿಬ್ಬಂದಿ ನೇಮಕಾತಿಗೆ ಸಕ್ಕರೆ ನಿರ್ದೇಶಕರು ನೇಮಕಾತಿ ಸಮಿತಿಗಳನ್ನು ರಚಿಸಿದ್ದು, ನೇಮಕಾತಿ ಸಮಿತಿಯ ವ್ಯಾಪ್ತಿಗೆ ಬರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ನೇಮಕಾತಿ ಸಮಿತಿಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಈ) ಮೀಸಲಾತಿ ನಿಯಮಗಳ ಪ್ರಕಾರ ಆಯಾ ವರ್ಗದವರಿಗೆ ಮೀಸಲಾತಿ ನೀಡಲಾಗುವುದು.

ಉ) ಕಾರ್ಖಾನೆಯು 2002-03ನೇ ಸಾಲಿನಲ್ಲಿ ಕಬ್ಬು ನುರಿಸುವ ಹಂಗಾಮು ಪ್ರಾರಂಭಿಸಿರುವುದರಿಂದ, ಮುಖ್ಯ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ, ನಿಯೋಜನೆ ಮೇಲೆ ಹಾಗೂ ತಾತ್ಕಾಲಿಕವಾಗಿ ತೆಗೆದುಕೊಂಡಿದ್ದು ಇವರ ಒಟ್ಟು ಸಂಖ್ಯೆ 460, ಈ ಪೈಕಿ 4 ಜನ ಮಾತ್ರ ಖಾಯಂ ಹುದ್ದೆಯಲ್ಲಿರುತ್ತಾರೆ.